**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪ್ರಭಾಕರ್.ಹೆಚ್.ಎನ್. | ***P.W-4*** |
| ತಂದೆಯ ಹೆಸರು | - | ಹೆಚ್.ಎನ್.ವೀರಭದ್ರಪ್ಪ | ***C.W-4*** |
| ವಯಸ್ಸು | - | 70 ವರ್ಷ | |
| ಉದ್ಯೋಗ | - | ನಿವೃತ್ತ ಮುಖ್ಯ ಶಿಕ್ಷಕ | |
| ವಾಸ | - | ಕೊಟ್ಟೂರು. | |

**ದಿನಾಂಕಃ 18-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಮಗಳು ಆಗಬೇಕು. ಚಾಸಾ-5 ನನ್ನ ಹೆಂಡತಿಯಾಗಿದ್ದು ಅವಳು ತೀರಿಕೊಂಡಿರುತ್ತಾಳೆ, ಚಾಸಾ-6 ನನ್ನ ಮಗ ಆಗಬೇಕು. ಚಾಸಾ-7 ನನ್ನ ಅಣ್ಣನಾಗಿದ್ದು ಅವರು ಈಗ ತೀರಿಕೊಂಡಿರುತ್ತಾರೆ.

2 ನೇ ಆರೋಪಿ ನನ್ನ ಮಗಳ ಗಂಡನಾಗಿರುತ್ತಾನೆ. 1 ಮತ್ತು 3 ನೇ ಆರೋಪಿತರು 2 ನೇ ಆರೋಪಿಯ ತಾಯಿ ಮತ್ತು ತಮ್ಮನಾಗಬೇಕು.

ದಿಃ 12-07-2013 ರಂದು ಚಾಸಾ-1 ಮತ್ತು 2 ನೇ ಆರೋಪಿಯ ಮದುವೆಯಾಗಿರುತ್ತದೆ. ಮೊದಲು ಆರೋಪಿತರು ನಮಗೆ ಯಾವುದೇ ವರದಕ್ಷಿಣೆ ಬೇಡ ಮದುವೆ ಮಾಡಿ ಕೊಟ್ಟರೆ ಸಾಕು ಎಂದು ಹೇಳಿದ್ದರು . ಮದುವೆಯಾದ ನಂತರ ಆರೋಪಿತರು ನಮಗೆ ಹಣ ಬೇಕು, ವಸ್ತು ಬೇಕು, ಬಂಗಾರ ಬೇಕು ಎಂದು ಕೇಳಿರುತ್ತಾರೆ. ಮದುವೆಯ ನಂತರ 2 ನೇ ಆರೋಪಿಗೆ ಬ್ರಾಸ್ಲೈಟ್ ನ್ನು , ಚಾಸಾ-1 ರವರಿಗೆ ಬಂಗಾರದ ತಾಳಿ ಸರ , ಬಳೆಗಳು , ಕಿವಿ ಓಲೆ, ಸರ ಹಾಗು ಇತರೆ

ಒಡವೆಗಳು ಒಟ್ಟು 25 ತೊಲ ಬಂಗಾರ ಕೊಟ್ಟಿರುತ್ತೇವೆ. 2 ½ ಕೆ.ಜಿ. ಬೆಳ್ಳಿಯ ವಸ್ತುಗಳನ್ನು ಕೊಟ್ಟಿರುತ್ತೇವೆ. ಪಾತ್ರೆ , ಬಟ್ಟೆ ಮತ್ತು ಇತರೆ ವಸ್ತುಗಳಿಗಾಗಿ ಒಟ್ಟು ನಾಲ್ಕು ಲಕ್ಷ ಖರ್ಚು ಮಾಡಿ 2 ನೇ ಆರೋಪಿಗೆ ಕೊಟ್ಟಿರುತ್ತೇವೆ. ಸುಮಾರು ಎಂಟು ಲಕ್ಷಕ್ಕಿಂತ ಹೆಚ್ಚು ಹಣ ಖರ್ಚು ಮಾಡಿ ಕೊಟ್ಟೂರಿನ ಕೊಟ್ಟೂರೇಶ್ವರ ಕಲ್ಯಾಣ ಮಂಟಪದಲ್ಲಿ ನನ್ನ ಮಗಳ ಮದುವೆ ಮಾಡಿ ಕೊಟ್ಟಿರುತ್ತೇನೆ. ನಾನು ಹಣ ಮತ್ತು ಒಡವೆ ಕೊಡಲು ಒಪ್ಪಿರಲಿಲ್ಲ ಆದರೆ ನನ್ನ ಮಗಳು ಚೆನ್ನಾಗಿ ಇರಲಿ ಎಂದು ಹೇಳಿ ನನ್ನ ಹೆಂಡತಿಯ ಸಾಕು ತಂದೆ ಸಿ.ಹಾಲನಗೌಡ ರವರೇ ದಾವಣಗೆರೆಯ ಮಲಬಾರ್ ಗೋಲ್ಡ ನಲ್ಲಿ ಆಭರಣಗಳನ್ನು ಖರೀದಿಸಿ 2 ನೇ ಆರೋಪಿಗೆ ಕೊಟ್ಟಿರುತ್ತಾರೆ.

ಮದುವೆಯ ನಂತರ ನನ್ನ ಮಗಳನ್ನು ಆರೋಪಿತರ ಮನೆಗೆ ಕಳುಹಿಸಿರುತ್ತೇನೆ. ಮದುವೆಯಾಗಿ ಕೆಲವು ತಿಂಗಳ ನಂತರ 2 ನೇ ಆರೋಪಿ ಮನೆ ಕಟ್ಟಲು ಐದು ಲಕ್ಷ ಹಣ ಬೇಕು ಎಂದು ಕೇಳಿದ್ದನು. 2 ನೇ ಆರೋಪಿ ಪ್ರತಿ ದಿನ ನನ್ನ ಮಗಳಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಡುತ್ತಿದ್ದ ಎಂದು ನನ್ನ ಹೆಂಡತಿಗೆ ನನ್ನ ಮಗಳು ಫೋನ್ ಮಾಡಿ ಹೇಳುತ್ತಿದ್ದಳು. ನನ್ನ ಮಗಳು ಗರ್ಭಿಣಿಯಾದಾಗ ಆರೋಪಿತರು ಅಬಾಶನ್ ಮಾಡಿಸಲು ಪ್ರಯತ್ನ ಪಟ್ಟಿರುತ್ತಾರೆ, ಅವರು ಎಷ್ಟು ಒತ್ತಾಯ ಪಟ್ಟರು ನನ್ನ ಮಗಳು ಒಪ್ಪಿರಲಿಲ್ಲ. ಹೆರಿಗೆಗೆ ಎಂದು ಹೇಳಿ ನನ್ನ ಮಗಳನ್ನು ತವರು ಮನೆಗೆ ಕರೆದು ಕೊಂಡು ಬಂದು ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ನನ್ನ ಮಗಳ ಹೆರಿಗೆ ಮಾಡಿಸಿರುತ್ತೇವೆ. ದಿಃ 08-09-2015 ರಂದು ನನ್ನ ಮಗಳಿಗೆ ಗಂಡು ಮಗು ಜನನ ಆಗಿರುತ್ತದೆ. ಹೆರಿಗೆಯಾದ ವಿಚಾರವನ್ನು 2 ನೇ ಆರೋಪಿಗೆ ತಿಳಿಸಿದ್ದರೂ ಸಹ ಸುಮಾರು 8 ತಿಂಗಳಾದರೂ ಮಗು ಮತ್ತು ಹೆಂಡತಿಯನ್ನು ನೋಡಲು ಬಂದಿರುವುದಿಲ್ಲ. ನಾವು ಎಷ್ಟು ಬೇಡಿಕೊಂಡರೂ ಸಹ ಆರೋಪಿತರು ತೊಟ್ಟಿಲು ಕಾರ್ಯ ಮಾಡಿರಲಿಲ್ಲ ಆದರೆ ನನ್ನ ಮಗಳೇ ಧೈರ್ಯ ವಹಿಸಿ ನಾನೇ ಹೋಗುತ್ತೇನೆ

ಎಂದು ಹೊರಟಿದ್ದು ನಾನು , ನನ್ನ ಹೆಂಡತಿ ಮತ್ತು ನನ್ನ ಮಗ ಸೇರಿ ನನ್ನ ಮಗಳನ್ನು ಮತ್ತು ತೊಟ್ಟಿಲನ್ನು ಕರೆದು ಕೊಂಡು ರಾಣೇಬೆನ್ನೂರಿನಲ್ಲಿರುವ 2 ನೇ ಆರೋಪಿಯ ಮನೆಗೆ ಹೋಗಿರುತ್ತೇವೆ . ಅಲ್ಲಿ ಯಾರೂ ಸಹ ನಮ್ಮನ್ನು ಸ್ವಾಗತಿಸಿರುವುದಿಲ್ಲ. ಆರೋಪಿಯ ಪಕ್ಕ-ಪಕ್ಕದ ಮನೆಯವರಾದ ಹನುಮಂತಪ್ಪ ಕಾಲವಾಡ ಮತ್ತು ಗುರುಶಾಂತಪ್ಪ ಇಂಚಗೇರಿ ರವರು ನಮಗೆ ಬಹಳ ಸಹಾಯ ಮಾಡಿರುತ್ತಾರೆ. ಅವರು ಎಲ್ಲರನ್ನು ಕರೆಯಿಸಿ ಬುದ್ಧಿವಾದ ಹೇಳಿದ್ದರು. ಸುಮಾರು ದಿನಗಳ ನಂತರ ಹಿರಿಯರನೆಲ್ಲಾ ಕರೆಯಿಸಿ ಪಂಚಾಯಿತಿ ಮಾಡಿದ್ದರು. ನಾವು ತೊಟ್ಟಿಲು ತೆಗೆದು ಕೊಂಡು ಅವರ ಮನೆಗೆ ಹೋಗಿದ್ದಾಗ ಅವರ ಮನೆಯಲ್ಲಿ ಯಾರೂ ಇರಲಿಲ್ಲ ಎದುರು ಮನೆಯವರ ಬಳಿ ಬೀಗ ಕೊಟ್ಟು ಹೋಗಿದ್ದರು, ಅವರಿಂದ ಬೀಗ ಪಡೆದು ಕೊಂಡು ನಾವು ಮನೆಯ ಒಳಗೆ ಹೋಗಿದ್ದೇವು. ಅಕ್ಕ-ಪಕ್ಕದವರೆಲ್ಲಾ ತೊಟ್ಟಿಲು ಕಾರ್ಯದ ಸಂಭ್ರಮ ಮಾಡಿದ್ದರು. ನನ್ನ ಮಾವ, ನನ್ನ ಅಣ್ಣ ಮತ್ತು ದೇವೇಂದ್ರಗೌಡ ಮತ್ತು ಇತರೆ ಹಿರಿಯರೆಲ್ಲಾ ಸೇರಿ ಪಂಚಾಯಿತಿ ಮಾಡಿದ್ದೇವು. ಆ ಪಂಚಾಯಿತಿಯಲ್ಲಿ 2 ನೇ ಆರೋಪಿ ನಾನು ಇನ್ನೂ ಮೇಲೆ ಸರಿಯಾಗಿರುತ್ತೇನೆ ಮದ್ಯಪಾನ ಮಾಡುವುದಿಲ್ಲ ಎಂದು ಹೇಳಿದ್ದನು ಹಾಗು ಪ್ರಮಾಣವನ್ನು ಮಾಡಿದ್ದನು. ಆದರೆ ಮರುದಿನ ರಾತ್ರಿಯೇ ಮದ್ಯದ ಬಾಟಲಿ ತೆಗೆದು ಕೊಂಡು ಬಂದು ಮನೆಯಲ್ಲಿಯೇ ಮದ್ಯಪಾನ ಮಾಡಿರುತ್ತಾನೆ. 2 ನೇ ಆರೋಪಿಯ ತಾಯಿಯಾದ ಗಿರಿಜಮ್ಮ ರವರು ಅವರ 2 ನೇ ಮಗನ ಮನೆಗೆ ಬೆಂಗಳೂರಿಗೆ ಹೋಗಿದ್ದರು ಆದರೆ ಪಂಚಾಯಿತಿ ಸಮಯದಲ್ಲಿ ಅವರು ಹಾಜರು ಇದ್ದರು.

ನಂತರ ಕೌಟುಂಬಿಕ ಕಲಹದ ಬಗ್ಗೆ ಸಿಡಿಪಿಓ ರಾಣೇಬೆನ್ನೂರು ರವರಿಗೆ ನಾವು ಒಂದು ಅರ್ಜಿಯನ್ನು ಕೊಟ್ಟಿದ್ದೇವು. ಅವರೂ ಸಹ ಅರ್ಜಿ ಪರಿಶೀಲನೆ ಮಾಡಿದ್ದರುಆದರೆ ನಮಗೆ ಅವರಿಂದ ಯಾವುದೇ ನ್ಯಾಯ ಸಿಗಲಿಲ್ಲ. ನಂತರ ಪ್ರತಿ

ದಿನ ರಾತ್ರಿ ಮೋಟಾರ್ ಸೈಕಲ್ ನಲ್ಲಿ 2 ನೇ ಆರೋಪಿ ಬಂದು ಗೇಟಿಗೆ ಡಿಕ್ಕಿ ಪಡಿಸಿ ನಮ್ಮನ್ನು ಹೆದುರಿಸಿ ಓಡಿಸಲು ಪ್ರಯತ್ನಿಸಿರುತ್ತಾರೆ. ಮನೆಯಲ್ಲಿದ್ದ ಟಿ.ವಿ., ಇತರೆ ಸಾಮಾನುಗಳು ಹಾಗು ಗ್ಯಾಸ್ ಗಳನ್ನು 2 ನೇ ಆರೋಪಿ ತೆಗೆದು ಕೊಂಡು ಹೋಗಿರುತ್ತಾನೆ. ಈ ರೀತಿ ನಾನಾ ಹಿಂಸೆಯನ್ನು ಕೊಟ್ಟಿರುತ್ತಾನೆ. ಸುಮಾರು 2 ತಿಂಗಳ ಕಾಲ ಮನೆಗೆ ರೇಶನ್ , ಮಗುವಿಗೆ ಹಾಲು ನಾನೇ ತಂದು ಕೊಟ್ಟಿರುತ್ತೇನೆ ಹಾಗು ಮನೆಯ ಕರೆಂಟ್ ಬಿಲ್ಲನ್ನು ಸಹ ನಾನೇ ಪಾವತಿಸಿರುತ್ತೇನೆ. ನಂತರ ಹಿಂಸೆಯನ್ನು ತಾಳಲಾರದೇ ರಾಣೇಬೆನ್ನೂರು ಟೌನ್ ಪೋಲಿಸ್ ಠಾಣೆಗೆ ಈ ಬಗ್ಗೆ ದೂರನ್ನು ಕೊಟ್ಟಿರುತ್ತೇವೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.